ತನಗೆ ಇನ್ನೂ ಐದು ದಿವಸದ ರಜೆ ಉಳಿದಿದೆ. ಈ ಡಿಸೆಂಬರ್ ಕೊನೆಯ ಒಳಗೇ ತೆಗೆದುಕೊಂಡು ಬಿಡಬೇಕು ಎಂದು ಯಾವುದೋ ಮಾತಿಗೆ ಮಾತು ಬಂದು ಅಂದಾಗ ಮಾಲತಿ, ಅವಳ ದೊಡ್ಡಮ್ಮನ ಮಗಳು, 'ಹೇಗಿದ್ದರೂ ನಮ್ಮ ಅನಿಲ್‌ನ ಮೂರನೆಯ ಹುಟ್ಟಿದ ಹಬ್ಬ ಹಾಗೂ ಚೌಲಕ್ಕೆ ಅಲ್ಲೇ ಬಂದುಬಿಡಿ ಅಂತಾ ನಮ್ಮತ್ತೆ–ಮಾವ ಬರ್ದಿದ್ದಾರೆ. ನೀನೂ ಯಾಕೆ ಬಂದುಬಿಡಬಾರ್‍ದು? ಬೆಂಗ್ಳೂರಲ್ಲಿ ಇದ್ದು– ಇದ್ದು ಬೇಜಾರೂ ಬಂದಿರತ್ತೆ. ಒಂದು ಸ್ವಲ್ಪ ದಿವ್ಸಾ ನಮ್ಮ ಮಲೆನಾಡ ಹಳ್ಳೀನೂ ನೋಡಿದ ಹಾಗೆ ಆಗತ್ತೆ' ಎಂದು ಪರಿಹಾರ ಸೂಚಿಸಿದ್ದಳು.ಅವಳ ಅತ್ತೆಮನೆ ಇರುವ ದೇವಂಗಿಗೆ ಹೇಗೆ ಬರಬೇಕು, ಎಲ್ಲಿ ಬಸ್ ಬದಲಾಯಿಸಬೇಕು, ಯಾವತ್ತು ಬರಬೇಕು ಎಲ್ಲಾ ಹೇಳಿ ತಾನು ಗಂಡ–ಮಗನೊಂದಿಗೆ ಒಂದು ವಾರ ಮುಂಚಿತವಾಗಿಯೇ ಹೋಗಿದ್ದಳು.

ಬೆಂಗಳೂರಿನಿಂದ ಶಿವಮೊಗ್ಗದವರೆಗಿನ ಪ್ರಯಾಣವೇ ಸುಮತಿಗೆ ಬೇಸರ ಬರಿಸಿತ್ತು. 'ಇನ್ನು ಶಿವಮೊಗ್ಗದಿಂದ ದೇವಂಗಿಗೆ ಹೇಗಪ್ಪಾ ಹೋಗೋದು, ಯಾಕಾದರೂ ಬರ್ತೀನಂತ ಒಪ್ಪಿಕೊಂಡೆನೋ ಏನೋ. ಹಾಯಾಗಿ ರಜಾ ಹಾಕಿ ಮನೇಲಿರೋದು ಬಿಟ್ಟು' ಎಂದು ಬೈದುಕೊಂಡೇ ದೇವಂಗಿ ಬಸ್ ಹತ್ತಿದವಳಿಗೆ ಅನಿರೀಕ್ಷಿತವಾಗಿ ಪ್ರಕೃತಿ ನೆರವಿಗೆ ಬಂದಿತ್ತು.

ಬಸ್ಸಿನ ಬಲಗಡೆ ಕೆರೆಯೊಂದು ಹರಡಿಕೊಂಡು ಅದರಲ್ಲಿ ಅಲ್ಲಲ್ಲಿ ಕಮಲಗಳು ಅರಳಿದ್ದುದು ಮುಂದುಗಡೆಯ ಗಾಜಿನಲ್ಲಿ ಕಾಣಿಸಿದಾಗ, ಆ ಸುಂದರ ದೃಶ್ಯವನ್ನು ತಪ್ಪಿಸಿಕೊಳ್ಳಲು ಇಷ್ಟಪಡದೆ ಬಲಗಡೆಯ ಕಿಟಕಿಯ ಮೂಲಕ ದೃಷ್ಟಿ ತೂರಿದಾಗ ಕೆರೆಯ ನೀರು, ಕಮಲ ಕಣ್ಣಿಗೆ ಬಿದ್ದರೂ ಮುಖ್ಯವಾಗಿ ಕಾಣಿಸಿದುದು ತನ್ನತ್ತಲೇ ದೃಷ್ಟಿಸುತ್ತಿದ್ದ ಅವನ ಕಣ್ಣುಗಳು.

ಶಿವಮೊಗ್ಗದ ಬಸ್‌ಸ್ಟ್ಯಾಂಡಿನಲ್ಲಿ ಬೆಂಗಳೂರಿನ ಬಸ್ಸಿನಿಂದ ಇಳಿದು, ದೇವಂಗಿ ಕಡೆಗೆ ಹೋಗುವ ಬಸ್ಸು ಹೊರಡಲು ಇನ್ನೂ ಒಂದು ಗಂಟೆಯ ಸಮಯವಿದೆ ಎಂದು ವಿಚಾರಿಸಿ ತಿಳಿದುಕೊಂಡೇ ಅವಳು ಹೋಟೆಲಿಗೆ ಹೋಗಿ ನಿಧಾನವಾಗಿ ಊಟ ಮಾಡಿ ಬಂದಿದ್ದಳು. ದೇವಂಗಿ ಬಸ್ಸೇನೋ ಬಂದು ನಿಂತಿತ್ತು. ಇನ್ನೂ ಹೊರಡಲು ಸಮಯವಿದ್ದುದರಿಂದ ಹತ್ತಿರದ ಪೆಟ್ಟಿಗೆ ಅಂಗಡಿಗೆ ಹೋಗಿ ವಾರಪತ್ರಿಕೆಯೊಂದನ್ನು ಕೊಂಡುತಂದಿದ್ದಳು. ಬಸ್ಸನ್ನು ಹತ್ತಿ ಒಳಗೆ ಕಾಲಿಡುತ್ತಿರುವಾಗಲೇ ಬಲಗಡೆಯ, ಮೂರುಜನ ಕೂಳಿತುಕೊಳ್ಳುವ ಸೀಟಿನಲ್ಲಿ ಕುಳಿತಿದ್ದ ಅವನು ಕಣ್ಣಿಗೆ ಬಿದ್ದಿದ್ದ. ಕಪ್ಪು ಪ್ಯಾಂಟ್, ಬಿಳಿಯ ಷರಟು ಹಾಕಿದ್ದ, ಸಾಕಷ್ಟು ಲಕ್ಷಣವಾಗಿದ್ದ ಅವನನ್ನು ಕಂಡು 'ಪರ್‍ವಾಗಿಲ್ಲ, ಒಳ್ಳೆಯ ಕಂಪೆನಿಯಾಯ್ತು' ಎಂದುಕೊಳ್ಳುವಾಗ ಅವನೂ ಅವಳ ಕಡೆಗೆ ನೋಡಿದ್ದ. ಅವನೂ ಅದೇ ತರಹ ಮನಸ್ಸಿನಲ್ಲಿ ಅಂದುಕೊಳ್ಳುತ್ತಿರುವ ಹಾಗೆ ಕಂಡಿತ್ತು. ಅವನು ಕುಳಿತ ಸಾಲಿನಲ್ಲೇ ಎಡಗಡೆಯಲ್ಲಿ ಇಬ್ಬರು ಕುಳಿತುಕೊಳ್ಳುವ ಸೀಟಿನಲ್ಲಿ ಕಿಟಕಿ ಹತ್ತಿರ ಕುಳಿತು ವಾರಪತ್ರಿಕೆಯನ್ನು ಬಿಚ್ಚಿ ಅದರಲ್ಲಿ ಮಗ್ನಳಾದಂತೆ ತೋರಿಸಿಕೊಂಡರೂ ಅವನ ದೃಷ್ಟಿಯ ಶಾಖ ಆಗಾಗ್ಗೆ ತನಗೆ ಹತ್ತುತ್ತಲೇ ಇತ್ತು. ನೇರವಾಗಿ ಅವನನ್ನು ನೋಡದೆ ಇದ್ದರೂ ಅವನ ಕಣ್ಣು ಆಗಾಗ್ಗೆ ತನ್ನ ಕಡೆಗೆ ತಿರುಗುವುದು ಅವಳ ಅನುಭವಕ್ಕೆ ಬರುತ್ತಿತ್ತು. ಇಬ್ಬರು ಕೂಡುವ ತನ್ನ ಸೀಟಿನಲ್ಲಿ ಇದ್ದುದು ತಾನೊಬ್ಬಳೇ. ಅವನಾದರೂ 3 ಜನರ ಸೀಟಿನಲ್ಲಿ ಒಬ್ಬನೇ ಇದ್ದುದರಿಂದ ಅವನ ದೃಷ್ಟಿಯ ದಾರಿಯಲ್ಲಿ ಯಾವ ಅಡ್ಡಿಯೂ ಇರಲಿಲ್ಲ.

ಹರೆಯದ ಯುವಕನೊಬ್ಬ ತನ್ನನ್ನು ಪದೇ ಪದೇ ನೋಡುವುದು ಅವಳಿಗೇನು ಹೊಸದಲ್ಲ. ಮೊನ್ನೆ ಮೊನ್ನೆ ಕಾಲೇಜಿನಲ್ಲಿ ಓದುತ್ತಿರುವಾಗ ಬೇಕಾದಷ್ಟು ಹುಡುಗರು ಕಾಲೇಜಿನವರೆಗೆ ಹಿಂಬಾಲಿಸಿ ಬರುತ್ತಿದ್ದರು. ಈಗ ಆಫೀಸಿನಲ್ಲಿ ಕೆಲಸ ಮಾಡುವಾಗಲಾದರೂ ಅಷ್ಟೇ. ಹತ್ತಾರು